**ಮೂಲ ದಾವಾ ನಂಃ 106/2016** **ಡಿ**

**ಡಬ್ಲುಃ 02**

ಸಾಕ್ಷಿಯನ್ನು ದಿನಾಂಕಃ **21-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್ ವಕೀಲರಿಂದಃ**

ಸದರಿ ನನ್ನ ಮುಖ್ಯ ವಿಚಾರಣೆಗೆ ನಮ್ಮ ವಕೀಲರು ಮಾಹಿತಿಯನ್ನು ನೀಡಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ , ಅದನ್ನು ನನಗೆ ಓದಿ ಹೇಳಿದ್ದಾರೆ, ನಾನು ಸಹ ಸದರಿ ಪ್ರಮಾಣ ಪತ್ರವನ್ನು ಬರೆಯಲು ಕೆಲವಂದಿಷ್ಟು ಅಂಶವನ್ನು ಹೇಳಿದ್ದೇನೆ.

ನಾನು, ನಾಗರಾಜ ಮತ್ತು ಮೋಹನರವರು ಒಂದೇ ದಿನ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇವೆ. ನಾವು ಮಾಹಿತಿಯನ್ನು ನೀಡುವಾಗ ಡಿ-ಡಬ್ಲು 01 ರವರು ಅಲ್ಲಿ ಇದ್ದರು. ನಾವು ಯಾವುದೇ ಕಾಗದ ಪತ್ರಗಳನ್ನು ವಕೀಲರಿಗೆ ಕೊಟ್ಟಿದ್ದು ಇರುವುದಿಲ್ಲ, ಆದರೆ ಡಿ-ಡಬ್ಲು 01 ರವರು ದಾಖಲೆಗಳನ್ನು ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ವಕೀಲರು ನಮಗೆ ನೋಟಿಸ್ ಕಾಪಿಯನ್ನು ತೋರಿಸಿದ್ದರು. ಸದರಿ ನೋಟಿಸ್ಸನಲ್ಲಿ ಸಾಕ್ಷಿದಾರರ ಬಗ್ಗೆ ನಮೂದಾಗಿತ್ತು.

ನಾವು ಬೆಳಿಗ್ಗೆ 11.00 ಗಂಟೆಯ ಸುಮಾರಿಗೆ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇವೆ. ನಾನು, ಬೈಕ್ ಮೇಲೆ ವಕೀಲರ ಮನೆಗೆ ಬಂದಿದ್ದೆನು. ನನ್ನ ಮನೆ ಕಡತೋಕಾದಲ್ಲಿದೆ. ರಾಮಚಂದ್ರ ಗಂಗಾಧರ ಶೆಟ್ಟಿ ಹಾಗೂ ನಮ್ಮ ಮನೆಯ ನಡುವಿನ ಅಂತರ ಅಂದಾಜು 1 1/2 ಮೀಟರ್ ಆಗಬಹುದು. ರಾಮಚಂದ್ರ ಹಾಗೂ ನನ್ನ ನಡುವೆ ಸುಮಾರು 30-40 ವರ್ಷಗಳಿಂದ ಪರಿಚಯ. ರಾಮಚಂದ್ರ ಮತ್ತು ಮಹಾಬಲೇಶ್ವರ ನಡುವೆ ಪಂಚಾಯತಿಯಾದ ಬಗ್ಗೆ ನನಗೆ ಗೊತ್ತಿಲ್ಲ. ರಾಮಚಂದ್ರ ಶೆಟ್ಟಿಗೆ ಇಬ್ಬರೂ ಸಹೋದರರು ಇರಬಹುದು, ಹಾಗೂ 3 ಜನ ಸಹೋದರಿಯರು ಇರಬಹುದು. ಅವರ ಸಹೋದರಿ ಹೆಸರು ಸುನಂದಾ ಹಾಗೂ ಇನ್ನಿಬ್ಬರ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ.

ರಾಮಚಂದ್ರ ಶೆಟ್ಟಿರವರ ತಂದೆಯು 2013 ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ, ಆ ನಂತರ ಅವರ ತಾಯಿಯು ತೀರಿಕೊಂಡಿದ್ದಾರೆ. ರಾಮಚಂದ್ರ ಶೆಟ್ಟಿಗೆ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ರಾಮಚಂದ್ರ ಶೆಟ್ಟಿ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ರಾಮಚಂದ್ರ ಶೆಟ್ಟಿಯ ತಂದೆಯು ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ವಿಲ್ ನಾಮೆಯನ್ನು 57 ಸರ್ವೆ ನಂಬರನ 37 ಗುಂಟೆಗೆ 166 ಸರ್ವೆ 1 ಎಕರೆ 36 ಗುಂಟೆ ಸಂಬಂಧಪಟ್ಟಂತೆ ಬರೆದಿದ್ದಾರೆ. ಸದರಿ ಆಸ್ತಿಗಳು ಹೇಗೆ ಬಂದಿವೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ.

ವಿಲ್ ನಾಮೆ ಮಾಡುವಾಗ ಪಹಣಿ ಪತ್ರಿಕೆಗಳನ್ನು ಹಾಗೂ ಇನ್ನಿತರ ದಾಖಲೆಗಳನ್ನು ತೋರಿಸಿದ್ದಾರೆ , ಹಾಗೂ ನಮ್ಮ ವಕೀಲರು ವಿಲ್ ನಾಮೆಯನ್ನು ಬರೆದು ನಮಗೆ ಓದಿ ಹೇಳಿದ್ದಾರೆ. ವಿಲ್ ನಾಮೆಯು ಬರೆಯುವ ಒಂದು ತಿಂಗಳ ಪೂರ್ವದಲ್ಲಿ ಗಂಗಾಧರ ಶೆಟ್ಟಿರವರು ನಮಗೆ ಹೇಳಿದ್ದರು. ನಾನು ಆ ಸಮಯದಲ್ಲಿ ಯಾವುದೇ ಸಲಹೆಗಳನ್ನು ನೀಡಿದ್ದು ಇರುವುದಿಲ್ಲ. ಆ ಸಮಯದಲ್ಲಿ ವಕೀಲರ ಹೆಸರನ್ನು ಹೇಳಿದ್ದರು. ಎಸ್.ಎನ್.ನಾಯ್ಕ ವಕೀಲರ ಕಚೇರಿ ಕಾಮತ್ ಹೋಟೆಲ್‌ನ ಎದುರಿಗೆ ಇತ್ತು. ಅವರು ವಿಲ್ ನಾಮೆಯನ್ನು ಬರೆಯುವ ಕಾಲಕ್ಕೆ ತೇಲಂಗ ಜೇರಾಕ್ಸ ಹತ್ತಿರ ಅವರ ಆಫೀಸ್ ಇತ್ತು ಎಂದರೆ ಸರಿಯಲ್ಲ. ವಿಲ್ ನಾಮೆಯ ಪ್ರಕಾರ ಹೆಣ್ಣು ಮಕ್ಕಳಿಗೆ ಪಾಲು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ವಿಲ್ ನಾಮೆಯ ಪ್ರಕಾರ ವಾದಿಗೆ ಹಕ್ಕು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಾವು ಕಚೇರಿಗೆ ಹೋದ ನಂತರ ವಿಲ್ ನಾಮೆಯನ್ನು

ಟೈಪ್ ಮಾಡಿದ್ದಾರೆ.  ವಿಲ್ ನಾಮೆಯನ್ನು ಮೊದಲು ಕೈಯಲ್ಲಿ ಬರೆದು ಓದಿ ಹೇಳಿ ಆ ನಂತರ ಟೈಪ್ ಮಾಡಿಸಿದ್ದಾರೆ.  ವಿಲ್ ನಾಮೆಯನ್ನು ಕೈಯಲ್ಲಿ ಬರೆದ ಹಾಳೆಯನ್ನು 1 ನೇ ಪ್ರತಿವಾದಿಗೆ  ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ.   ನಾನು ಅದಕ್ಕೆ ಸಹಿಯನ್ನು ಹಾಕಿದ್ದೇನೆ. ಸ್ಟಾಂಪ್ ಪೇಪರ ರೀತಿ ಇರುವ ದಾಖಲೆಯಲ್ಲಿ ಟೈಪ್ ಮಾಡಿದ್ದರು.  ನಾನು ಅದಕ್ಕೆ ಸಹಿಯನ್ನು ಹಾಕಿದ್ದೇನೆ .  ನಾನು ಸಬ್ ರಿಜಿಸ್ಟ್ರಾರ್  ಕಚೇರಿಗೆ ಹೋಗಿದ್ದು ಇರುವುದಿಲ್ಲ, ಹಾಗೂ  1 ನೇ
ಪ್ರತಿವಾದಿಯು ಹೋದ ಬಗ್ಗೆ ನನಗೆ ಗೊತ್ತಿಲ್ಲ.  ನನಗೆ ವಕೀಲರ ಕಚೇರಿಯಲ್ಲಿ ಸಹಿ ಹಾಕಿದ್ದನ್ನು ಹೊರತುಪಡಿಸಿ  , ಅವರು ಮುಂದೆ ಏನು ಮಾಡಿದ್ದರು ಎಂಬುದರ ಬಗ್ಗೆ ನನಗೆ  ಮಾಹಿತಿ ಇಲ್ಲ.

ವಿಲ್ ನಾಮೆ ಮಾಡುವ ಕಾಲಕ್ಕೆ ನಾನು ನಾಗರಾಜ , ಮೋಹನ ಹಾಗೂ ರಾಮಚಂದ್ರ ಹಾಗೂ  ಗಂಗಾಧರ ಹಾಗೂ ಆತನ ಹೆಂಡತಿ ಬಂದಿದ್ದರು.  ಗಂಗಾಧರನ ಹೆಂಡತಿಯು ಸಹ ಸಹಿ ಹಾಕಿದ್ದರು.  ನಾನು ವಿಲ್ ನಾಮೆಗೆ ಒಂದೇ ಸಹಿಯನ್ನು ಹಾಕಿದ್ದೇನೆ.  ನಾವು 3 ಜನ (ನಾನು ನಾಗರಾಜ ಹಾಗೂ ಮೋಹನ) ಟೆಂಪೋದಲ್ಲಿ ಹೋಗಿದ್ದೇವು.

ನಾನು ಎಸ್.ಎನ್.ನಾಯ್ಕ ವಕೀಲರ ಕಚೇರಿಗೆ  ವಿಲ್ ನಾಮೆಗೆ ಸಹಿಯನ್ನು ಹಾಕಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ  ಒತ್ತಾಯದ ಮೇರೆಗೆ  ಹಾಗೂ ಅವರೇ ಮುಂದೆ ನಿಂತು ಗಂಗಾಧರ ಶೆಟ್ಟರವರ ಕಡೆಯಿಂದ ವಿಲ್ ನಾಮೆಯನ್ನು  ಬರೆಯಿಸಿ ಕೊಂಡಿದ್ದಾರೆ  ಎಂದರೆ ಸರಿಯಲ್ಲ.  ಗಂಗಾಧರ ಶೆಟ್ಟರವರರಿಗೆ  ಆ ಸಮಯದಲ್ಲಿ ವಯೋಸಹಜ  ಖಾಯಿಲೆಯಿಂದ ಅವರಿಗೆ ಸರಿಯಾಗಿ ಏನು ತಿಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.

ಮೂಲ ದಾವಾ ನಂಃ 106/2016

ಡಿ ಡಬ್ಲುಃ 03

ಸಾಕ್ಷಿಯನ್ನು ದಿನಾಂಕಃ **21-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್ ವಕೀಲರಿಂದಃ**

ನನ್ನ ಮನೆ ಕಡತೋಕಾದ ಜಡ್ಡಿಗದ್ದೆಯಾಗಿದೆ. ನಮ್ಮ ಮನೆಯಿಂದ 1 ನೇ ಪ್ರತಿವಾದಿಯ ಮನೆಯು 1 1/2 ಕಿ.ಮಿ ದೂರವಾಗುತ್ತದೆ. ನಾನು ಪೇಪರ್ ಹಾಕುವ ಕೆಲಸ ಮಾಡುತ್ತೇನೆ , ಹಾಗೂ ಮಧ್ಯಾಹ್ನ ಗೋಬಿ ಅಂಗಡಿಯನ್ನು ನಡೆಸುತ್ತೇನೆ. 1 ನೇ ಪ್ರತಿವಾದಿಯು 2007 ನೇ ಸಾಲಿನಿಂದ ನನ್ನ ಕಡೆ ಹಾಲಿನ ಪ್ಯಾಕೇಟಗಳನ್ನು ಪಡೆಯುತ್ತಿದ್ದರು.

1 ನೇ ಪ್ರತಿವಾದಿಗೆ ಎಷ್ಟು ಜನ ಅಕ್ಕ ತಂಗಿಯರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಗಂಗಾಧರ ಶೆಟ್ಟಿರವರಿಗೆ ಎಷ್ಟು ಆಸ್ತಿ ಇದೆ ಹಾಗೂ ಎಲ್ಲೆಲ್ಲಿ ಆಸ್ತಿ ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ಗಂಗಾಧರ ಶೆಟ್ಟಿರವರ ಮಗನಾಗದ 1 ನೇ ಪ್ರತಿವಾದಿಯು ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತಿದ್ದನು. ಗಂಗಾಧರ ಶೆಟ್ಟಿಯವರು ನಾನು ಹಾಲು ಕೊಡಲು ಪ್ರಾಂಭಿಸಿದಾಗಿನಿಂದ ವೃದ್ಧರಾಗಿದ್ದರು ಎಂದರೆ ಸರಿ , ಹಾಗೂ ಅವರು ಹಾಸಿಗೆ ಮೇಲೆ ಇರುತ್ತಿದ್ದರು ಎಂದರೆ ಸರಿ. ಅವರ ದಿನನಿತ್ಯದ ಕೆಲಸಗಳನ್ನು ಅವರ ಮಗ ಮಾಡುತ್ತಿದ್ದನು. ವಿಲ್ ನಾಮೆಯನ್ನು ಮಾಡುವ ಪೂರ್ವದಲ್ಲಿ ಗಂಗಾಧರ ಶೆಟ್ಟಿರವರು ನನ್ನನ್ನು ಕರೆದು ಅದರ ಬಗ್ಗೆ ಹೇಳಿಲ್ಲ.

ಮನೆಯ ವ್ಯವಹಾರದ ಬಗ್ಗೆ ಗಂಗಾಧರ ಶೆಟ್ಟಿರವರು ನನ್ನ ಮುಂದೆ ಮಾತನಾಡಿದ್ದು ಇರುವುದಿಲ್ಲ. ಸದರಿ ವಿಲ್ ನಾಮೆಯಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ವಿಲ್ ನಾಮೆಯನ್ನು ಯಾರು ಮುಂದೆ ನಿಂತು ಬರೆಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಎಸ್.ಎನ್.ನಾಯ್ಕ ವಕೀಲರ ಕಚೇರಿಯಲ್ಲಿ ವಕೀಲರು ವಿಲ್ ನಾಮೆಯನ್ನು ನನಗೆ ಓದಿ ಹೇಳಿದ ನಂತರ ನನ್ನ ಸಹಿಯನ್ನು ಪಡೆದಿದ್ದಾರೆ. ವಿಲ್ ನಾಮೆಯನ್ನು ಓದಿ ಹೇಳುವ ಕಾಲಕ್ಕೆ ನಾನು ಒಬ್ಬನೇ ಇದ್ದನು. ಎಸ್.ಎನ್.ನಾಯ್ಕ ವಕೀಲರ ಕಚೇರಿ ತೇಲಂಗ ಜೇರಾಕ್ಸ ಹತ್ತಿರ ಇರುವ ಕಚೇರಿಯಲ್ಲಿ ಸಹಿಯನ್ನು ಮಾಡಿದ್ದೇನೆ. ನಾನು ವಿಲ್ ನಾಮೆಗೆ ಒಂದೇ ಸಹಿಯನ್ನು ಹಾಕಿದ್ದೇನೆ.

1 ನೇ ಪ್ರತಿವಾದಿಯು ವಿಲ್ ನಾಮೆಗೆ ಸಹಿ ಹಾಕುವಂತೆ ನನಗೆ ಹೇಳಿದರು. ನಾನು , ಪಾಂಡುರಂಗ , ಹಾಗೂ ಮೋಹನ ರವರು 3 ಜನ ಟೆಂಪೋದಲ್ಲಿ ವಕೀಲರ ಕಚೇರಿಗೆ ಹೋಗಿದ್ದೇವು. ವಿಲ್ ನಾಮೆಯಲ್ಲಿ ಯಾವ ಯಾವ ಸರ್ವೇ ನಂಬರಗಳು ಯಾರಿಗೆ ಹೋಗಬೇಕು ಎಂಬುದಾಗಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸಹಿ ಹಾಕಲು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿದ್ದು ಇರುವುದಿಲ್ಲ. ನಾನು ಬಾಂಡ್ ಪೇಪರನಲ್ಲಿ ಸಹಿಯನ್ನು ಹಾಕಿದ್ದೇನೆ. ನಾನು 1 ನೇ ಪ್ರತಿವಾದಿಯ ಮಾತನ್ನು ಕೇಳಿ ಅವರ ಮನೆಯಲ್ಲಿಯೇ ಸದರಿ ವಿಲ್ ನಾಮೆಗೆ ಸಹಿಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.

ಮೂಲ ದಾವಾ ನಂಃ 106/2016

ಡಿ ಡಬ್ಲುಃ 04

ಸಾಕ್ಷಿಯನ್ನು ದಿನಾಂಕಃ **21-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಜಿ.ಪಿ.ಹೆಚ್ ವಕೀಲರಿಂದಃ**

ನಮ್ಮ ಮೂಲ ಮನೆ ಮಲ್ಲಾಪುರದಲ್ಲಿದೆ. ನಾವು ಕೆಕ್ಕಾರದಲ್ಲಿ ವಾಸವಾಗಿ ಅಂದಾಜು 48 ವರ್ಷವಾಯಿತು. ನಾವು ಗುತ್ತಿಗೆಯ ಆಧಾರದ ಮೇಲೆ ವಿಳ್ಳೆದೆಲೆ ಕೊಯ್ಯುವ ಕೆಲಸವನ್ನು ಮಾಡುತ್ತೇವೆ. 1 ನೇ ಪ್ರತಿವಾದಿಯ ತೋಟದ ವಿಳ್ಳೆದೆಲೆ ಕೊಯ್ಯುವ ಕೆಲಸವನ್ನು ನಾವೇ ಮಾಡುತ್ತೇವೆ.

ವ್ಯವಹಾರದ ದೃಷ್ಟಿಕೋಣದಿಂದ ನನ್ನ ಮತ್ತು 1 ನೇ ಪ್ರತಿವಾದಿಯ ಒಡನಾಟ ಚೆನ್ನಾಗಿದೆ. ಗಂಗಾಧರ ಶೆಟ್ಟಿರವರ ವ್ಯವಹಾರವನ್ನು 1 ನೇ ಪ್ರತಿವಾದಿಯು ಮಾಡಿಕೊಂಡು ಬಂದಿದ್ದಾರೆ. ಗಂಗಾಧರ ಶೆಟ್ಟಿರವರು ತೀರಿಕೊಂಡಾಗ ಅವರ ವಯಸ್ಸು ಎಷ್ಟಾಗಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಗಂಗಾಧರ ಶೆಟ್ಟಿರವರು ಸಾಯುವ 3 ವರ್ಷದ ಪೂರ್ವದಿಂದ ಅವರು ಪ್ಯಾರಾಲೈಸಸ್ ಖಾಯಿಲೆಯಿಂದ ಬಳಲುತ್ತಿದ್ದರು. 1 ನೇ ಪ್ರತಿವಾದಿಯೇ ಗಂಗಾಧರ ಶೆಟ್ಟಿರವರ ಆರೈಕೆಯನ್ನು ಮಾಡುತ್ತಿದ್ದರು. ಗಂಗಾಧರ ಶೆಟ್ಟಿರವರು ಸಾಯುವ ಒಂದು ವರ್ಷ ಹಿಂದಿನಿಂದಲೂ ಹಾಸಿಗೆಯನ್ನು ಹಿಡಿದಿದ್ದರು. ಗಂಗಾಧರ ಶೆಟ್ಟಿರವರು ಪ್ಯಾರಾಲೈಸಸ್ ಆದರೂ ಸಹ ಮಾತನಾಡುತ್ತಿದ್ದರು.

ಗಂಗಾಧರ ಶೆಟ್ಟಿರವರು ಅವರ ಕುಟುಂಬದ ವ್ಯವಹಾರವನ್ನು ನನ್ನ ಜೊತೆ ಚರ್ಚೆ ಮಾಡಿದ್ದು ಇರುವುದಿಲ್ಲ. ಗಂಗಾಧರ ಶೆಟ್ಟಿರವರವರಿಗೆ ಈ ಮೊದಲು ಮಾಡಗೇರಿಯಲ್ಲಿ ಆಸ್ತಿ ಇತ್ತು , ಆದರೆ ಎಷ್ಟು ಆಸ್ತಿ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಗಂಗಾಧರ ಶೆಟ್ಟಿರವರು ಕೆಕ್ಕಾರನಲ್ಲಿ ಆಸ್ತಿಯನ್ನು ಪಡೆದಿದ್ದಾಗಿ ನನ್ನ ಮುಂದೆ ಹೇಳುತ್ತಿದ್ದರು , ಆದರೆ ಎಷ್ಟು ಆಸ್ತಿ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ಗಂಗಾಧರ ಶೆಟ್ಟಿರವರ ಕೆಕ್ಕಾರ ಆಸ್ತಿಯ 1 ಎಕರೆ ಕ್ಷೇತ್ರದಲ್ಲಿ ವಿಳ್ಳೆದೆಲೆ ಕೊಯ್ಯಲು ಹೋಗುತ್ತಿದ್ದೆನು.ಗಂಗಾಧರ ಶೆಟ್ಟಿರವರ ಬೇರೆ ಆಸ್ತಿಯಲ್ಲಿ ವಿಳ್ಳೆದೆಲೆ ಕೊಯ್ಯಲು ಹೋಗಿದ್ದು ಇರುವುದಿಲ್ಲ.

ಗಂಗಾಧರ ಶೆಟ್ಟಿರವರರಿಗೆ ಎರಡು ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ವಿಲ್ ನಾಮೆಯನ್ನು ಬರೆಯುವ 15 ದಿನಗಳ ಪೂರ್ವದಲ್ಲಿ ನನಗೆ ವಿಲ್ ನಾಮೆಯ ಬಗ್ಗೆ ಅವರ ಮನೆಯಲ್ಲಿ ನನಗೆ ಹೇಳಿ, ಆ ಮೇಲೆ ಸಹಿಯನ್ನು ಹಾಕುವಂತೆ ಎಂದು ನನಗೆ ತಿಳಿಸಿದ್ದರು. ಆದರೆ ಅದು ಯಾವ ಆಸ್ತಿಗಳ ಬಗ್ಗೆ ವಿಲ್ ನಾಮೆಯನ್ನು ಬರೆಯುತ್ತಿರುವುದಾಗಿ ಅವರು ಹೇಳಿದ್ದು ಇರುವುದಿಲ್ಲ.

ವಿಲ್ ನಾಮೆಯ ಮೂಲಕ 1 ನೇ ಪ್ರತಿವಾದಿ ಹೆಸರಿಗೆ ಆಸ್ತಿಗಳನ್ನು ಬರೆದಿದ್ದಾರೆ , ಮತ್ತು ಬೇರೆಯವರಿಗೆ ಯಾವ ಯಾವ ಆಸ್ತಿಗಳನ್ನು ವಿಲ್ ನಾಮೆಯ ಮೂಲಕ ಬರೆದಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಗೆ ವಿಲ್ ನಾಮೆಯ ಮೂಲಕ ಯಾವ ಯಾವ ಆಸ್ತಿಗಳು ಮತ್ತು ಎಷ್ಟು ಕ್ಷೇತ್ರಗಳು ಬಂದಿವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ವಿಲ್ ನಾಮೆಯನ್ನು ನನಗೆ ಓದಿ ಹೇಳಿದ ನಂತರ ನಾನು ಅದಕ್ಕೆ ಸಹಿಯನ್ನು ಹಾಕಿದ್ದೇನೆ . ವಿಲ್ ನಾಮೆಯನ್ನು ಬರೆಸಲಿಕ್ಕೆ ಗಂಗಾಧರ ಶೆಟ್ಟಿರವರು ಕಾಮತ್ ಹೋಟೆಲ್ ನ ಹತ್ತಿರವಿದ್ದ ಕಚೇರಿಯಲ್ಲಿ ಮಾಹಿತಿಯನ್ನು ನೀಡಿದ್ದಾರೆ. ಆ ಸಮಯದಲ್ಲಿ ಗಂಗಾಧರ ಶೆಟ್ಟಿ ಹಾಗೂ ಆತನ ಹೆಂಡತಿ ಮತ್ತು 1 ನೇ ಪ್ರತಿವಾದಿಯು ಆ ಕಚೇರಿಗೆ ಬಂದಿದ್ದರು. ಮತ್ತು ನಾನು ನಾಗರಾಜ ಹಾಗೂ ಪಾಂಡುರಂಗರವರು ಟೆಂಪೋದಲ್ಲಿ ಸುಮಾರು 9.30 ರ ಸುಮಾರಿಗೆ ಆ ಕಚೇರಿಗೆ ಬಂದಿದ್ದರು. ಗಂಗಾಧರ ಶೆಟ್ಟಿರವರು ನಮಗೆಲ್ಲ ಎಸ್.ಎನ್.ನಾಯ್ಕ ವಕೀಲರ ಕಚೇರಿಗೆ ಬರುವಂತೆ ತಿಳಿಸಿದ್ದರು.

ವಿಲ್ ನಾಮೆಯನ್ನು ಕೈಯಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಎಸ್.ಎನ್ ನಾಯ್ಕ ವಕೀಲರು ನಮಗೆ ವಿಲ್ ನಾಮೆಯನ್ನು ಓದಿ ಹೇಳಿದ ನಂತರ ನಮ್ಮ ಸಹಿಯನ್ನು ಪಡೆದಿದ್ದಾರೆ. ನಾವು ಆ ಕಚೇರಿಯಲ್ಲಿದ್ದಾಗ , ಗಂಗಾಧರ ಶೆಟ್ಟರವರು ವಕೀಲರ ಜೊತೆ ಮಾತನಾಡುತ್ತಿದ್ದರು. ಗಂಗಾಧರ ಶೆಟ್ಟರವರು ವಕೀಲರಿಗೆ ವಿಲ್ ನಾಮೆಯ ಕುರಿತಾಗಿ ಮಾಹಿತಿಯನ್ನು ನೀಡುತ್ತಿದ್ದರಾ ಎಂದು ಕೇಳಿದಾಗ , ಸಾಕ್ಷಿಯು ನನಗೆ ಓದಿ ಹೇಳಿ ಸಹಿಯನ್ನು ಪಡೆದಿದ್ದಾರೆ ಎಂಬುದಾಗಿ ನುಡಿಯುತ್ತಿದ್ದಾರೆ. 1 ನೇ ಪ್ರತಿವಾದಿಯು ವಿಲ್ ನಾಮೆಗೆ ಸಹಿ ಹಾಕಿದ್ದನ್ನು ನಾನು ನೋಡಿದ್ದು ಇರುವುದಿಲ್ಲ. ಗಂಗಾಧರ ಶೆಟ್ಟರವರು ವಿಲ್ ನಾಮೆಗೆ ಒಂದು ಬಾರಿ ಸಹಿಯನ್ನು ಹಾಕಿದ್ದಾರೆ. ಗಂಗಾಧರ ಶೆಟ್ಟರವರು ಒಂದು ಪೇಪರ್ ಮೇಲೆ ಸಹಿಯನ್ನು ಹಾಕಿದ್ದಾರೆ , ಅದು ಬಾಂಡ್ ಪೇಪರ್ ಎಂದು ಕೇಳಿದಾಗ , ಸಾಕ್ಷಿಯು ಹೌದು ಎಂದು ನುಡಿದಿದ್ದಾರೆ.

ನಾನು ಬಾಂಡ್ ಪೇಪರ್ ಮೇಲೆ ಅಥವಾ ಸಾದಾ ಹಾಳೆಯ ಮೇಲೆ ಸಹಿ ಹಾಕಿದ್ದೇನೆ ಎಂಬುದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ಅವರಿಗೆ ಸಹಾಯ ಮಾಡಲು ಅವರ ಮನೆಯಲ್ಲಿ ವಿಲ್ ನಾಮೆಗೆ ಸಹಿಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಮನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ , ಅವರಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.